## ಕವಿತೆ




ಸ್ಮಿತಾ ಅಮೃತರಾಜ್, ಸಂಪಾಜೆ

ಕಲೆ:ಎಸ್.ಎಸ್. ಕಾಖಂಡಕಿ


# ಬಂಧ ಹಸನಾದಾಗ



ಅಂಗಳದ ಪಾತಿಯಲ್ಲಿ ನೆಟ್ಟ  
ದಾಸವಾಳ ಗಿಡ ಆಕಾಶಕ್ಕೆ ಮುಖ ಮಾಡಿ  
ಚಿಗಿಯುತ್ತದೆ  
ಚಾವಣಿಯ ಬಿಟ್ಟಕ್ಕೆ ತೂಗು ಬಿಟ್ಟ  
ಕುಂಡದೊಳಗಿನ ಹೂ ಬಳ್ಳಿ ನೆಲಕ್ಕೆ  
ಜಿಗಿಯಲು ಹಾತೊರೆಯುತ್ತದೆ

ಮಣ್ಣಿನ ಗಿಡ ಆಕಾಶ ನೆನೆಯುವುದು  
ಆಕಾಶದ ಗಿಡ ಮಣ್ಣ ಕನಸುವುದು  
ಹೊಸತೇನಲ್ಲ

ಬೆಸುಗೆ ಗಟ್ಟಿಯಾಗಿ ಬಂಧ  
ಹಸನಾಗಿರುವಾಗ  
ಮಣ್ಣಿನ ಮೇಲೆಯೇ ಹಬ್ಬಿಕೊಳ್ಳುತ್ತದೆ  
ತಿಮರೆ ಬಳ್ಳಿ  
ಆಕಾಶದಲ್ಲೇ ಬೆಳಗಿಕೊಳ್ಳುತ್ತದೆ  
ನಕ್ಷತ್ರ

ಭಾರವಾದಗಲೆಲ್ಲಾ ಅವಳು  
ಕವಿತೆಯ ಧ್ಯಾನಕ್ಕೆ ಬಿದ್ದು ಚಡಪಡಿಸುವುದು  
ಅವನು ಪದ್ಯ ಹೊಸೆದು ಹಗುರವಾಗುವುದು  
ವಿಶೇಷವೇನಿದೆ ಅಲ್ಲಿ?

ಹಾಲು ಸುರಿವ ಬೆಳಂದಿಗಳಿನಲ್ಲೂ  
ತಾರೆಯೊಂದು ಉದುರಿದಾಗ  
ಒಸರುಕ್ಕುವ ಹಸಿಮಣ್ಣಲ್ಲೂ  
ಬಳ್ಳಿಯೊಂದು ಒಣಗಿದಾಗ  
ತಿಳಿವು ಹೊಳೆಯುತ್ತದೆ.